# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 191/2021**

**ಸಿ.ಡಬ್ಲೂ: 07 ಪಿಡಬ್ಲೂ: 02**

ಸಾಕ್ಷಿದಾರರ ಹೆಸರುಃ ರಾಜು ತಂದೆಃ ಶಮಪ್ಪ
ವಯಸ್ಸುಃ 31 ವರ್ಷ
ಉದ್ಯೋಗಃ ಆಟೋ ಡ್ರೈವರ
ಸಾಕೀನಃ ನವಲಿ.

ದಿಃ 23-12-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

**01.** ಆರೋಪಿತನ ಪರಿಚಯ ನನಗೆ ಇರುವುದಿಲ್ಲ, ನಾನು ಈಗ ನೋಡುತ್ತಿರುವ ದಾಖಲೆ ಮೇಲೆ ಸುಮಾರು 1 ವರ್ಷ ಹಿಂದೆ ನಾನು ಮೈಲಾರದ ಗ್ರಾಮಕ್ಕೆ ನಾನು ಆಟೋವನ್ನು ಓಡಿಸಿಕೊಂಡು ಹೋಗುತ್ತಿರುವಾಗ ಪೊಲೀಸರು ನನ್ನನ್ನು ಕರೆದಿರುತ್ತಾರೆ ಪೋಲೀಸರ ಕೋರಿಕೆಯ ಮೇಲೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಕೃತ್ಯ ಸ್ಥಳದ ಜಪ್ತು ಪಂಚೆನಾಮೆ ಅಗಿದ್ದು, ಅದನ್ನು ಈಗಾಗಲೇ ನಿಪಿ-02 ಎಂದು, ಸಾಕ್ಷಿಯ ಸಹಿಯನ್ನು ನಿಪಿ-02 ಬಿ ಎಂದು ಗುರುತಿಸಲಾಯಿತು. ಆದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಜಪ್ತು ಪಂಚೆನಾಮೆಯನ್ನು ಮಾಡಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ ರವರಿಂದ ;

02. ದಿನಾಂಕ ಃ **19-12-2020** ರಂದು ನನ್ನ ಮತ್ತು ಚಾ.ಸಾ.08 ರವರ ಸಮಕ್ಷಮ ಚಾ.ಸಾ.01 ರವರು ಸಂಜೆ.04.45 ರಿಂದ 05.45 ಗಂಟೆಯವರೆಗೆ ನಿ.ಪಿ.02 ರಂತೆ ಜಪ್ತು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.02 ರ ಸಮಯದಲ್ಲಿ 90 ಎಮ್.ಎಲ್.ನ ಬ್ಲಾಕ್ ಬೇಲ್ಟ್ ಫೈನ್ ವಿಸ್ಕೀ 49 ಪೌಚಗಳನ್ನು ಹಾಗೂ ಪ್ಲಾಸ್ಟಿಕ್ ಚೀಲವನ್ನು ನಮ್ಮಗಳ ಸಮಕ್ಷಮ ಜಪ್ತು

**ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.02 ರಲ್ಲಿ ಬರೆದಿರುವ ಸಂಗತಿಗಳೆಲ್ಲವೂ ಗೊತ್ತಿದ್ದರೂ ಸಹ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

<u>ಮರುವಿಚಾರಣೆಃ</u> ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

ನನ್ನ ಸಮಕ್ಷಮ

**Sd/-**

**(ಶ್ರೀಮತಿ ಅಕ್ಷತಾ ಟಿ)**

ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.